# ಮಯಿನಾಬಾಯಿ ಮತ್ತು ಮಹಾರಾಣಿ ಚಿಮನಾಬಾಯಿ

ಮೂಲ : **'Swami Vivekananda: The Great Inspirer', ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ**
ಅನುವಾದ : **ಸ್ವರ್ಣಗೌರಿ**

## ಮಯಿನಾಬಾಯಿ

### ಹೊಸ ತಿರುವು

**ಮ**ಯಿನಾ ಬಾಯಿ ರಾಜನ ಆಸ್ಥಾನದ ನರ್ತಕಿಯಾಗಿದ್ದಳು. ಸ್ವಾಮಿ ವಿವೇಕಾನಂದರು ಖೇತ್ರಿಗೆ ಭೇಟಿಯಿತ್ತಾಗ, ಆ ಚಿಕ್ಕ ರಾಜ್ಯವು ಸ್ವಾಮೀಜಿಯವರನ್ನು ಪರಮಾದರಗಳಿಂದ ಸ್ವಾಗತಿಸಿತು. ಒಂದು ದಿನ ಆಸ್ಥಾನದಲ್ಲಿ ನರ್ತನ, ಗಾಯನಗಳನ್ನು ಏರ್ಪಡಿಸಿದ ಖೇತ್ರಿ ಮಹಾರಾಜ ಸ್ವಾಮೀಜಿಯವರನ್ನೂ ಆಹ್ವಾನಿಸಿದರು. ಸ್ತ್ರೀಯರ ಗಾಯನ, ನರ್ತನವನ್ನು ಸಂನ್ಯಾಸಿ ವೀಕ್ಷಿಸುವುದಾಗಲಿ, ಕೇಳುವುದಾಗಲಿ ಶಾಸ್ತ್ರ ನಿಷೇಧವೆಂದು ಈ ಆಹ್ವಾನವನ್ನು ಮನ್ನಿಸಲಿಲ್ಲ ಸ್ವಾಮೀಜಿ.

ಸ್ವಾಮೀಜಿಯ ಧೋರಣೆಯಿಂದ ನೊಂದ ಮಯಿನಾಬಾಯಿ ವಿನೀತಳಾಗಿ ಸೂರದಾಸರ ಭಜನೆಯೊಂದನ್ನು ಹಾಡಿದಳು: **'ಪ್ರಭು ಮೇರೆ ಅವಗುಣ ಚಿತ ನ ಧರೋ'** ('ಹೇ ಪ್ರಭು! ನನ್ನ ದುರ್ಗುಣಗಳನ್ನು ನೋಡಬೇಡ. ನಿನ್ನನ್ನು ಜನರು ಸಮದರ್ಶಿ ಎಂದು ಕರೆಯುವರು') ಈ ಹಾಡು, ನರ್ತಕಿಯ ನಿಷ್ಕಾಪಟ್ಯ ಸ್ವಾಮೀಜಿಯವರು ಅಂತರಂಗವನ್ನು ತಟ್ಟಿತು. ಕೂಡಲೇ ತಮ್ಮ ನಿರ್ಧಾರವನ್ನು ಬದಲಿಸಿ ಆಸ್ಥಾನಕ್ಕೆ ಆಗಮಿಸಿದ ಸ್ವಾಮೀಜಿ ಮಯಿನಾಬಾಯಿಗೆ ನಮಸ್ಕರಿಸಿದರು. ತಮ್ಮ ಕಣ್ಣು ತೆರೆಸಿದ್ದಕ್ಕಾಗಿ ಅವಳಿಗೆ ಕೃತಜ್ಞತೆಗಳನ್ನು ಅರ್ಪಿಸಿದರು. ನೈಜ ಸಂನ್ಯಾಸಿ ಎಲ್ಲಾ ಭೇದಗಳನ್ನು ಮೀರಿರುತ್ತಾನೆ. ಏಕೆಂದರೆ ವೇದಾಂತದ ಪ್ರಕಾರ ಆತ್ಯಂತಿಕ ಸತ್ಯವಾದ ಬ್ರಹ್ಮವೇ ಪ್ರಪಂಚದಲ್ಲೆಲ್ಲಾ ಓತಪ್ರೋತವಾಗಿರುವುದು. ಅನಂತರ ಸ್ವಾಮೀಜಿ, "ಆ ಘಟನೆಯು ನನ್ನ ಅಜ್ಞಾನದ ಪೊರೆಯನ್ನು ಕಳಚಿತು. ಎಲ್ಲರೂ ಆ ಒಂದೇ ಸತ್ಯದ ಆವಿರ್ಭಾವವಾಗಿರುವುದನ್ನು ನೋಡುತ್ತಿರುವೆ. ಯಾರನ್ನೂ ದೂಷಿಸಲಾರದ ಸ್ಥಿತಿಯಲ್ಲಿರುವೆ" ಎನ್ನುತ್ತಿದ್ದರು.

ಈ ಘಟನೆಯ ನಂತರ ಮಯಿನಾಬಾಯಿಯ ಜೀವನ ಹೊಸ ತಿರುವನ್ನು ಪಡೆಯಿತು. ಆಕೆ ನರ್ತಕಿಯ ಕಸುಬನ್ನು ತೊರೆದು ಭಗವತ್ ಸಾಕ್ಷಾತ್ಕಾರಕ್ಕಾಗಿ ತಪಸ್ಸಿಗೆ ಹೊರಟುಹೋದಳು.

*"ನಮಗೆ ಶಕ್ತಿ ಬೇಕು; ಸ್ವಾತಂತ್ರ್ಯ ಪ್ರೇಮ ಬೇಕು... ಈಗ ಇರುವ ಸ್ಥಿತಿಗಿಂತ ಉತ್ತಮರಾಗಬೇಕೆಂಬ ತೀವ್ರ ದಾಹ ನಮ್ಮಲ್ಲಿರಬೇಕು." (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂ. ೫, ಪು.೪೩೧)*

## ಮಹಾರಾಣಿ ಚಿಮನಾಬಾಯಿ

### ಸ್ತ್ರೀ ಶಿಕ್ಷಣದ ಪ್ರವರ್ತಕರು

**ಮ**ಹಾರಾಜ ಸಯ್ಯಾಜಿ ರಾವ್ ಗಾಯಕ್‌ವಾಡ್‌ರ ದ್ವಿತೀಯ ಪತ್ನಿ ರಾಣಿ ಚಿಮನಾಬಾಯಿ. ಆಕೆಗೆ ಬಾಲ್ಯದಿಂದಲೂ ವಿದ್ಯಾಭ್ಯಾಸದಲ್ಲಿ ಅದೆಷ್ಟು ಆಸಕ್ತಿ ಎಂದರೆ ಶಾಲೆಗೆ ಹೋಗಿ ಕಲಿಯಲಾಗದಿದ್ದರೂ ವಿವಾಹದ ನಂತರ ಅರಮನೆಗೆ ಶಿಕ್ಷಕರನ್ನು ಕರೆಸಿ ಓದುಬರಹ ಕಲಿತಳು. ಸಾಮಾಜಿಕ ಕೆಡಕುಗಳನ್ನು ತೀವ್ರವಾಗಿ ಪ್ರತಿಭಟಿಸಿ, ಸ್ತ್ರೀಯರ ಶಿಕ್ಷಣಕ್ಕಾಗಿ ಪತಿಯನ್ನು ಉತ್ತೇಜಿಸಿದಳು. ಸಿಂಹಿಣಿಯಂತೆ ಧೈರ್ಯವನ್ನು ಹೊಂದಿದ್ದ ಆಕೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮ್ಯಾಡಂ ಕಾಮಾರಿಗೆ ಆರ್ಥಿಕ ಸಹಾಯ ನೀಡಿದಳು. ಒಮ್ಮೆ ಮಹಾಬಲೇಶ್ವರದಲ್ಲೋ ಅಥವಾ ಪುಣೆಯಲ್ಲೋ ಸ್ವಾಮಿ ವಿವೇಕಾನಂದರನ್ನು ಸಂದರ್ಶಿಸಿದ್ದಳು. ನಂತರ ಕಾಶ್ಮೀರದಲ್ಲಿ ಸ್ವಾಮಿ ಅಭೇದಾನಂದರನ್ನು ಪ್ರಥಮ ಬಾರಿ ಭೇಟಿಯಾದಾಗ ಮಹಾರಾಣಿಯು ಹೆಣ್ಣು ಮಕ್ಕಳಿಗೆ ಶಾಲೆ ತೆರೆದರೆ ತಾನು ಎಲ್ಲಾ ರೀತಿಯಲ್ಲೂ ಸಹಾಯ ಮಾಡುವುದಾಗಿ ವಚನವಿತ್ತಳು. ಸ್ವಾಮಿ ವಿವೇಕಾನಂದರ ಸಂದರ್ಶನ ವ್ಯಕ್ತಿತ್ವ ರಾಣಿಯ ಮೇಲೆ ಎಂತಹ ಗಾಢವಾದ ಪ್ರಭಾವ ಬೀರಿತೆಂದರೆ, ವೃದ್ಧಾಪ್ಯದಲ್ಲೂ ಸಹ ರಾಣಿಯು ಪ್ರತಿನಿತ್ಯ ಸ್ವಾಮೀಜಿಯವರ ಕೃತಿಶ್ರೇಣಿಯನ್ನು ಓದುತ್ತಿದ್ದಳು. ಒಮ್ಮೆ ಬ್ರಿಟಿಷ್ ಅಧಿಕಾರಿಗಳ ಮನೋರಂಜನೆಗೆಂದು ರಾಜವಂಶದವರು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಆದರೆ ಆ ಐರೋಪ್ಯ ಮಹಿಳೆಯರು ಕಾರ್ಯಕ್ರಮ ಪ್ರಾರಂಭವಾಗುವ ಮುನ್ನವೇ ಇದ್ದಕ್ಕಿದ್ದಂತೆ ಸಭೆಯಿಂದ ಹೊರನಡೆದರು. ಕೆಲವು ಕಾಲದ ನಂತರ ಐರೋಪ್ಯರ ಸಮಾರಂಭಕ್ಕೆ ರಾಣಿ ಚಿಮನಾಬಾಯಿಯನ್ನು ಆಮಂತ್ರಿಸಿದರು. ಸ್ವಾಭಿಮಾನಿಯೂ, ಚುರುಕು ಬುದ್ಧಿಯವಳೂ ಆದ ರಾಣಿಯು ಬದಲಿಗೆ ಬದಲು ಎಂಬಂತೆ ತಾನೂ ಸಭಾಮಧ್ಯೆ ಎದ್ದು ಹೊರಟುಹೋದಳು!



*"ಭಾರತದ ಮಹಿಳೆಯರಿಗಾಗಿ ಕೆಲಸ ಮಾಡುವುದಕ್ಕೆ ಬೇಕಾಗಿರುವುದು ಪುರುಷನಲ್ಲ ಸ್ತ್ರೀ, ನಿಜವಾದ ಸ್ತ್ರೀ, ನಿಜವಾದ ಸಿಂಹಿಣಿ..."(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂ. ೫, ಪು.೫೯)*